ಸರ್ಕಾರಿ ಪದವಿ ಕಾಲೇಜುಗಳ ಪ್ರಾರಂಭ

272 (312)

ಶ್ರೀ ಅಭಯ್ ಪಾಟೀಲ್

ಅ) ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ವಿವಿಧ ಮತಕ್ಷೇತ್ರಗಳಲ್ಲಿ ಹೊಸದಾಗಿ ಆರಂಭವಾಗುವ ಪದವಿಕಾಲೇಜುಗಳು (ಸರ್ಕಾರಿ/ಖಾಸಗಿ) ಯಾವುವು;

ಆ) ಬೆಳಗಾವಿ ಮತಕ್ಷೇತ್ರದಲ್ಲಿನ ಸರ್ಕಾರದ ಪದವಿ ಪೂರ್ವ ಕಾಲೇಜುಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಾದರೆ, ಯಾವ ಸಾಲಿನಿಂದ ಆರಂಭಿಸಲಾಗುವುದು?

ಶ್ರೀ ಸಿ.ಟಿ.ರವಿ

(ಉನ್ನತ ಶಿಕ್ಷಣ ಸಚಿವರು)

ಅ) ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹೊಸದಾಗಿ 5-6 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆಗಳು ಪರಿಶೀಲನೆಯಲ್ಲಿರುತ್ತದೆ.

ಆ) ಇಲ್ಲ.

CBSE ಗೆ ಪರಿವರ್ತನೆ ಕೋರಿರುವ ಅರ್ಜಿಗಳು

297 (389)

ಶ್ರೀ ಯು.ಟಿ.ಖಾದರ್ (ಮಂಗಳೂರು)

ಅ) ರಾಜ್ಯ ಪಠ್ಯಕ್ರಮದಿಂದ ಸಿ.ಬಿ.ಎಸ್.ಇ.ಗೆ ಪರಿವರ್ತನೆ ಕೋರಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಎಷ್ಟು ಶಿಕ್ಷಣ ಸಂಸ್ಥೆಗಳು ನಿರಾಕ್ಷೇಪಣಾ ಪತ್ರ (ಎನ್.ಓ.ಸಿ) ಕೋರಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. (ವಿವರ ಒದಗಿಸುವುದು).

ಆ) ಈ ಪೈಕಿ ಎಷ್ಟು ಶಿಕ್ಷಣ ಸಂಸ್ಥೆಗಳಿಗೆ ನಿರಾಕ್ಷೇಪಣಾ ಪತ್ರ (ಎನ್.ಓ.ಸಿ. ನೀಡಲಾಗಿದೆ) (ಕ್ಷೇತ್ರವಾರು ವಿವರ ಒದಗಿಸುವುದು.)

ಶ್ರೀ ವಿಶ್ವೇಶ್ವರಯ್ಯ ಹೆಗೆಡ ಕಾಗೇರಿ

(ಮಾನ್ಯ ಪ್ರಾಥಮಿಕ ಮತು ಪ್ರೌಢ ಶಿಕ್ಷಣ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯಿಂದ ಒಟ್ಟು 25 ಶಿಕ್ಷಣ ಸಂಸ್ಥೆಗಳು ನಿರಾಕ್ಷೇಪಣಾ ಪತ್ರ (ಎನ್.ಓ.ಸಿ.) ಕೋರಿ ಅರ್ಜಿ ಸಲ್ಲಿಸಿರುತ್ತಾರೆ.